RA NO. 44/2022

AW –1 .

Dated 23–08–2024.

<u>ಸಾಕ್ಷಿಯನ್ನು ಈ ದಿನ ದಿನಾಂಕ 23–08– 2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .</u>

<u>ಪಾಟೀ ಸವಾಲುಃ ಎದುರುದಾರ ಪರವಾಗಿ ಶ್ರೀ ಆರ್ ಎಸ್ ಕೆ ವಕೀಲರಿಂದಃ</u>

ಉಳಿದ ಮೇಲ್ಮನವಿದಾರರು ನನಗೆ ಅಧಿಕಾರ ಪತ್ರ ಕೊಟ್ಟಿರುತ್ತಾರೆ. ಸದರಿ ಅಧಿಕಾರ ಪತ್ರವನ್ನು ಪ್ರಸ್ತುತ ಮೇಲ್ಮನವಿಯಲ್ಲಿ ಸಲ್ಲಿಸಿರುತ್ತೇನೆ. ಈ ಮಾತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 171/2011 ರಲ್ಲಿ ನಾನು ಪ್ರತಿ ಮುದ್ದತ್ತಿಗೆ ಹಾಜರು ಆಗಿರುತ್ತೇನೆ. ಸದರಿ ದಾವೆ ಯಾವಾಗ ತೀರ್ಪು ಆಗಿರುತ್ತದೆ ಎಂದು ನನಗೆ ಗೊತ್ತಿರುತ್ತದೆ. ಯಾವ ದಿನಾಂಕದಂದು ತಿರ್ಪು ಆಯಿತು ಎಂದು ನನಗೆ ದಿನಾಂಕ ಗೊತ್ತಿಲ್ಲ ಆದರೆ ಸದರಿ ದಾವೆ ತಿರ್ಪು ಆದ ನಂತರ ಸದರಿ ತೀರ್ಪಿನ ವಿಷಯ ನನಗೆ ಗೊತ್ತಾಗಿರುತ್ತದೆ. ನನ್ನ ಮೇಲ್ಮನವಿ ಮೇಮೊನಲ್ಲಿ ಅಸಲು ದಾವಾ ಸಂಖ್ಯೆ 171/2011 ದಿನಾಂಕ 28-09-2011 ರಂದು ತೀರ್ಪು ಆಗಿರುತ್ತದೆ ಅಂತಾ ಬರೆಸಿರುತ್ತೇನೆ ಎಂದರೆ ನಿಜ. ಪ್ರಸ್ತುತ ಮೇಲ್ಮನವಿ ಯನ್ನು ಅಸಲು ದಾವಾ ಸಂಖ್ಯೆ 171/2011 ತೀರ್ಪು ಆದ ವಿಷಯ ನನಗೆ ಗೊತ್ತಾದ 40 ದಿನಗಳ ನಂತರ ಸಲ್ಲಿಸಿದ್ದೇನೆ. 1 ನೇ ಎದುರುದಾರ ನಮ್ಮ ವಿರುದ್ದ ತೀರ್ಪಿನ ಆದೇಶ ಉಲ್ಲಂಗಣೆ ಕುರಿತು ನಮ್ಮ ಮೇಲೆ ವಿಚಾರಣಾ ನ್ಯಾಯಾಲಯದಲ್ಲಿ ಕ್ರಮ ಕೈಗೊಳ್ಳಲು ಕೇಸು ಹಾಕಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ . ನಾನು ಹೊಲದಲ್ಲಿ ಕೆಲಸ ಮಾಡುತ್ತಿದ್ದಿದ್ದರಿಂದ ನನಗೆ ತೀರ್ಪು ಆದ ವಿಷಯ ತಕ್ಷಣ ಗೊತ್ತಾಗಿರುವುದಿಲ್ಲ . ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಲು ಆದ ಕಾಲ ವಿಳಂಬದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಕೇಸಿಗೆ ಅನುಕೂಲ ಆಗಲಿ ಎಂದು ಖೊಟ್ಟಿ ಸಾಕ್ಷಿ ಹೇಳುತಿತದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.